

# ಮಕ್ಕಳೆದುರು ಮಾತನಾಡುವಾಗ ಎಚ್ಚರವಿರಲಿ..

**ಬೆಳೆಯುವ ಮಕ್ಕಳು ನಾವು ಹೇಳುವ ಬುದ್ಧಿಮಾತುಗಳನ್ನು ಕೇಳುವುದಕ್ಕಿಂತಲೂ, ನಮ್ಮ ನಡೆ ನುಡಿಗಳನ್ನು ಅನುಕರಿಸುವುದೇ ಹೆಚ್ಚು.**

■ **ಡಾ.ವಿನಯ ಶ್ರೀನಿವಾಸ್**

'ಶರತ್, ನಿಮ್ಮ ಕ್ಲಾಸ್ ಟೀಚರ್ ಸಂಧ್ಯಾ ಮ್ಯಾಮ್ ನಮ್ಮ ಸೆಕ್ಷನ್‌ಗೂ ಬರ್ತಾರೆ.... ನಮಗೆ ಸೈನ್ಸ್ ಹೇಳಿಕೊಡ್ತಾರೆ'

'ಅಯ್ಯೋ.., ಅವರಾ.... ಆ ಮ್ಯಾಮ್‌ಗೆ ಏನೂ ಗೊತ್ತಿಲ್ಲ ಕಣೋ..ನಮಗೆ ಮ್ಯಾಥ್ಸ್ ತಗೋತಾರೆ..'

ಇದು ಆರನೇ ತರಗತಿಯಲ್ಲಿ ಓದುತ್ತಿರುವ ತಂಗಿಯ ಮಗ ಶೌರ್ಯ ಹಾಗೂ ಆತನ ಸಹಪಾಠಿ ಶರತ್ ನಡುವೆ ಅಂದು ನಡೆದ ಸಂಭಾಷಣೆ. ಒಳಗಿನ ಕೋಣೆಯಲ್ಲಿ ಕುಳಿತಿದ್ದ ನಾನು ಮಕ್ಕಳ ಈ ಮಾತುಗಳನ್ನು ಕೇಳಿ ನಿಧಾನವಾಗಿ ಹೊರ ಬಂದೆ. ಮಕ್ಕಳಿಬ್ಬರೂ ಪುಸ್ತಕಗಳನ್ನು ಹರಡಿಕೊಂಡು ಶಾಲೆಯಲ್ಲಿ ಕೊಟ್ಟ ಚಟುವಟಿಕೆಯೊಂದನ್ನು ಮಾಡುವುದರಲ್ಲಿ ಮಗ್ನರಾಗಿದ್ದರು. 'ಶರತ್.., ಸಂಧ್ಯಾ ಮ್ಯಾಮ್‌ಗೆ ಏನೂ ಗೊತ್ತಿಲ್ಲ ಅಂತ ನಿನಗೆ ಹೇಗೆ ಗೊತ್ತಾಯ್ತು ಮರಿ..?' ಎಂದು ಕೇಳಿದೆ. ಅದಕ್ಕೆ ಆ ಪೋರ, 'ನನ್ನ ಅಮ್ಮನೇ ಅಪ್ಪನ ಎದುರು ಹೇಳ್ತಿರ್ತಾರೆ ಆಂಟಿ.....ಆ ಮ್ಯಾಮ್‌ಗೆ ಲೆಕ್ಕ ಏನೂ ಬರೋದಿಲ್ಲ ಅಂತ...' ಎಂದ.

ಶರತ್‌ನ ತಾಯಿ ಮಗುವಿನ ಮುಂದೆ ಆತನಿಗೆ ಪಾಠ ಹೇಳಿಕೊಡುವ ಶಿಕ್ಷಕಿಯೊಬ್ಬರ ಬಗ್ಗೆ ಆ ರೀತಿ ಹೇಳಿದ್ದು ಎಷ್ಟರಮಟ್ಟಿಗೆ ಸರಿ..?

ನೆನಪಿಡಿ, ಬೆಳೆಯುವ ಮಕ್ಕಳು ನಾವು ಹೇಳುವ ಬುದ್ಧಿಮಾತುಗಳನ್ನು ಕೇಳುವುದಕ್ಕಿಂತಲೂ, ನಮ್ಮ ನಡೆ ನುಡಿಗಳನ್ನು ಅನುಕರಿಸುವುದೇ ಹೆಚ್ಚು. ಮನೆಯಲ್ಲಿ ನಾವು ಇತರರೊಡನೆ ಹೇಗೆ ನಡೆದುಕೊಳ್ಳುತ್ತೇವೆ.., ಏನು ಮಾತನಾಡುತ್ತೇವೆ ಎಂಬುದನ್ನು ಅವರು ಸದಾ ಗಮನಿಸುತ್ತಿರುತ್ತಾರೆ. ಅವರ ಇನ್ನೂ ಪಕ್ವವಾಗದ ಮನಸ್ಸು ಅದನ್ನೇ ಸರಿ ಎಂದು ನಿರ್ಧರಿಸುತ್ತದೆ. ಅಷ್ಟೇ ಅಲ್ಲ, ನಾವು ವ್ಯಕ್ತಿಯೊಬ್ಬರ ಬಗ್ಗೆ ಆಡುವ ಮಾತುಗಳನ್ನು ಕೇಳಿಸಿಕೊಂಡು, ಅದರ ಆಧಾರದ ಮೇಲೆಯೇ ಅವರು ಆ ವ್ಯಕ್ತಿಯ ವ್ಯಕ್ತಿತ್ವದ ಚಿತ್ರಣವನ್ನು ಮನಸ್ಸಿನಲ್ಲಿ ಮೂಡಿಸಿಕೊಳ್ಳುತ್ತಾರೆ.

ಹೀಗಿರುವಾಗ, ಮಕ್ಕಳೆದುರು ನಾವು ಆಡುವ ಪ್ರತಿಯೊಂದು ಮಾತಿನ ಬಗ್ಗೆಯೂ ನಾವು ಬಹಳ ಎಚ್ಚರವಹಿಸಬೇಕು. ಅದರಲ್ಲಿಯೂ ಎಳೆಯರ ಜೀವನದಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುವ ತಾಯಿ, ತಂದೆ ಹಾಗೂ ಶಿಕ್ಷಕರ ಬಗ್ಗೆ ಮಾತನಾಡುವಾಗಲಂತೂ ನಾವು

